1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**.36/2022**

ಹೆಸರುಃ ಜಯಪ್ಪ ಚಾಸಾಃ 1

ತಂದೆಃ ಬೊಮ್ಮಪ್ಪ ಫ್ರಾಸಾ: 3

ವಯಸ್ಸುಃ 56

ಉದ್ಯೋಗಃ ಕೂಲಿ

ವಾಸ ಸ್ಥಳಃ ಗೊಪ್ಪೇನಹಳ್ಳಿ ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 05-09-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ 17-09-2021 ರಂದು ನಾನು ಮತ್ತು ನನ್ನ ಹೆಂಡತಿ ನಮ್ಮ ಮನೆಯ ಬೀಗ ಹಾಕಿಕೊಂಡು ಬೆಂಗಳೂರಿಗೆ ಹೋಗಿದ್ದೆವು.

ದಿನಾಂಕಃ 22-09-2021 ರಂದು ನಮ್ಮ ಮನೆಯ ಮುಂದೆ ಮನೆಯವರಾದ ಚಾಸಾ 9 ರವರು ಬೆಳಗ್ಗೆ 7.00 ಗಂಟೆಗೆ ನಮಗೆ ದೂರವಾಣಿಯ ಮೂಲಕ ಕರೆ ಮಾಡಿ ನಿಮ್ಮ ಮನೆಯ ಬಾಗಿಲು ತೆರೆದಿದೆ ಎಂದು ತಿಳಿಸಿದರು. ನಂತರ ನಾವು ಬೆಂಗಳೂರಿನಿಂದ ಊರಿಗೆ ಬಂದು ಮನೆಗೆ ಹೋಗಿ ನೋಡಿದೆವು . ನಾನು ಮನೆಗೆ ಹೋಗಿ ನೋಡಿದಾಗ ಬಾಗಿಲು ಹೊಡೆದು ಬೀರೂವಿನ ಲಾಕರ್ ನ್ನು ಹೊಡೆದು ಬಟ್ಟೆ ಬರೆಗಳನ್ನು ಚಲ್ಲಾಪಿಲ್ಲಿಯಾಗಿ ಹರಡಿದ್ದರು . ಸದರಿ ಬೀರೂವಿನಲ್ಲಿ ನಗದು ರೂಃ 55,000/- , 5 ಗ್ರಾಂ ಕಿವಿಯೊಲೆ , 5 ಗ್ರಾಂ ಉಂಗುರ ಕಳ್ಳತನವಾಗಿದ್ದವು . ನಂತರ ನಾನು ಅದೇ ದಿನ ಸಂಜೆ 4.00 ಗಂಟೆಗೆ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ .

ಈಗ ಸಾಕ್ಷಿಗೆ ಒಂದು ದೂರನ್ನು ತೋರಿಸುತ್ತಿದ್ದು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದೂರನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 1 ಎ ಎಂದು ಗುರುತಿಸಲಾಯಿತು.

ಅದೇ ದಿನ ಪೊಲೀಸ್ ನವರು ಪಂಚನಾಮೆಯನ್ನು ಮಾಡಲು ಗೊಪ್ಪೇನಹಳ್ಳಿ ಗ್ರಾಮದಲ್ಲಿ ಇರುವ ನಮ್ಮ ಮನೆಗೆ ಬಂದರು. ಸದರಿ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಪೊಲೀಸರು ಸಂಜೆ 5.00 ರಿಂದ 6.00 ಗಂಟೆಯವರೆಗೆ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ .

ಈಗ ಸಾಕ್ಷಿಗೆ ಮಹಜರ್ ನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ಈಗಾಗಲೇ ನಿಶಾನೆ ಪಿ 3 ಎಂದು ಗುರುತಿಸಲಾಗಿರುತ್ತದೆ . ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 3 ಎ ಎಂದು ಗುರುತಿಸಲಾಯಿತು.

ಸದರಿ ಮಹಜರ್ ಸಮಯದಲ್ಲಿ ನನ್ನ ಜೊತೆ ಚಾಸಾ 2 ಮತ್ತು 3 ರವರು ನನ್ನ ಜೊತೆ ಸ್ಥಳದಲ್ಲಿ ಇದ್ದು ಸಹಿಯನ್ನು ಮಾಡಿರುತ್ತಾರೆ .

ದಿಃ 20-10-2021 ರಂದು ಪೊಲೀಸರು ಆರೋಪಿಯನ್ನು ನನ್ನ ಮನೆಯ ಹತ್ತಿರ ಕರೆದುಕೊಂಡು ಬಂದರು. ಆರೋಪಿಗೆ ಮನೆಯನ್ನು ತೋರಿಸಿ ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ಜರುಗಿಸಿದರು. ಸದರಿ ಆರೋಾಪಿಯನ್ನು ಸಾಕ್ಷಿಗೆ ವಿಡಿಯೋ ಕನ್ಫ್ ರೆನ್ಸ್ ಮೂಲಕ ತೋರಿಸಲಾಗಿ ಆರೋಪಿಯನ್ನು ಗುರುತಿಸಿರುತ್ತಾರೆ .

ನಾನು ಆರೋಪಿಯನ್ನು ಕರೆದುಕೊಂಡು ನಮ್ಮ ಮನೆಗೆ ಬಂದಾಗ ಮರುಹೇಳಿಕೆಯನ್ನು ನೀಡಿರುತ್ತೇನೆ .

ಸಾಕ್ಷಿಯು ಸದರಿ ಕಳ್ಳತನವಾಗಿದ್ದ ಮಾಲುಗಳನ್ನು ನ್ಯಾಯಾಲಯದಿಂದ ಆದೇಶವನ್ನು ಪಡೆದು ನನ್ನ ವಶಕ್ಕೆ ಪಡೆದಿರುತ್ತೇನೆ ಮತ್ತು ಮಾಲುಪಟ್ಟಿ ಸಂಖ್ಯೆ 3 ರಲ್ಲಿ ಇದ್ದ ರೂಃ 5,000/- ನಗದನ್ನು ನಾನು ನನ್ನ ಅಗತ್ಯಗಳಿಗೆ ಬಳಸಿಕೊಂಡಿರುತ್ತೇನೆ. ಸದರಿ ಮಾಲುಗಳನ್ನು ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ಮಾಲು ಸಂಖ್ಯೆಃ 3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಮಾಲುಪಟ್ಟಿಯಲ್ಲಿ ಹಾಜರುಪಡಿಸಿದ್ದ ಮಾಲುಗಳನ್ನು ನಾನು ಪುನಃ ನನ್ನ ವಶಕ್ಕೆ ಪಡೆದಿರುತ್ತೇನೆ .

ಆರೋಪಿ ಪರ ವಕೀಲರಾದ ಎಸ್.ಎಸ್. ವಕೀಲರಿಂದಃ-

ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸದರಿ ದೂರನ್ನು ದಕ್ಷಿಣಾ ಮೂರ್ತಿ ಎನ್ನುವವರು ಬರೆದರು. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಮುಂದುವರೆದು ನಾನು ಹೇಳಿದ್ದನ್ನು ಅವರು ಬರೆದಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದೂರವಾಣಿ ಕರೆಯ ಸಂಖ್ಯೆ ನನಗೆ ನೆನಪಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದು ನನ್ನ ಮೊಬೈಲ್ ನಲ್ಲಿ ಇರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ದಿನಾಂಕದಂದು ಪೊಲೀಸರು ಸ್ಥಳಕ್ಕೆ ಬರುವ ಮೊದಲೇ ನಾನು ಚಾಸಾ 18 ರವರಿಗೆ ಮನೆಯ ಒಳಗೆ ಹೋಗಿ ನೋಡಲು ಹೇಳಿರುತ್ತೇನೆ . ಸಾಕ್ಷಿಯು ಮುಂದುವರೆದು ಚಾಸಾ 18 ರವರು ಬೀರೂ ಹೊಡೆದಿದೆ ಎಂದು ತಿಳಿಸಿರುತ್ತಾರೆ ಎಂದು ನುಡಿಯತ್ತಾರೆ. ನಾನು ನನ್ನ ದೂರಿನಲ್ಲಿ ಬೆಂಗಳೂರಿನಿಂದ ಹೊರಟು ಗೊಪ್ಪೇನಹಳ್ಳಿ ತಲುಪಿದ ಸಮಯವನ್ನು ತಿಳಿಸಿರುವುದಿಲ್ಲ. ಬೀರೂ ಲಾಕರ್ ನ್ನು ಯಾವ ಆಯುಧ ದಿಂದ ತೆಗೆದಿದ್ದರು ಎನ್ನುವ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ .

ನಾನು ಬೆಂಗಳೂರಿಗೆ ಖಾಸಗಿ ಕಾರ್ಯಕ್ರಮಕ್ಕೆ ಹೋಗಿದ್ದರ ಬಗ್ಗೆ ಯಾವುದೇ ದಾಖಲಾತಿಗಳನ್ನು ಪೊಲೀಸರಿಗೆ ದೂರು ನೀಡುವ ಸಮಯದಲ್ಲಿ ನೀಡಿರುವುದಿಲ್ಲ ಎಂದರೆ ಸರಿ. ಸದರಿ ಬೀರೂ ಗಾಡ್ರೆಜ್ ನಲ್ಲಿ ಯಾವ ಮುಖಬೆಲೆಯ ರೂಃ 55,000/- ಗಳನ್ನು ಇಟ್ಟಿದ್ದೆ ಎಂದು ನನಗೆ ನೆನಪಿರುವುದಿಲ್ಲ. ಚಿನ್ನದ ಆಭರಣಗಳು ನನ್ನದೇ ಎನ್ನುವುದಕ್ಕೆ ಯಾವುದೇ ಬಿಲ್ಲುಗಳನ್ನು ನೀಡಿರುವುದಿಲ್ಲ ಎಂದರೆ ಸರಿ. ಚಾಸಾ 2 ಮತ್ತು 3 ರವರು ಒಂದೇ ಊರಿನವರು ಎಂದರೆ ಸರಿ .

ಮಹಜರ್ ಬರೆದವರ ಹೆಸರು ನನಗೆ ಗೊತ್ತಿಲ್ಲ . ಮಹಜರ್ ಮಾಡುವ ಕಾಲಕ್ಕೆ ಎಷ್ಟು ಜನ ಉಪಸ್ಥಿತ ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ . ಸದರಿ ಮಹಜರ್ ನ್ನು ನನ್ನ ಮನೆಯಲ್ಲಿ ಜರುಗಿಸಿರುತ್ತಾರೆ . ಸದರಿ ಆರೋಪಿಯನ್ನು ನಾನು ನ್ಯಾಯಾಲಯದಲ್ಲಿ ಇದೇ ಮೊದಲಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ . ಪೊಲೀಸರ ಮುಂದೆ ನಾನು ಮಹಜರ್ ಮಾಡುವ ಸಮಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ .

ನಿ ಪಿ 3 ರಲ್ಲಿ ಇರುವ ಸಹಿ ನನ್ನದೇ ಎಂದರೆ ಸರಿ , ಸದರಿ ದಾಖಲೆಂ‌ುನ್ನು ಪೊಲೀಸ್ ಠಾಣೆಯಲ್ಲಿ ಬರೆದು ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ . ಮಾಲುಪಟ್ಟಿಯಲ್ಲಿ ಇದ್ದ ರೂಃ 5,000/- ನಗದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಮುಂದುವರೆದು ಬಡತನದ ನಿಮಿತ್ತ ನಾನು ಅದನ್ನು ಬಳಕೆ ಮಾಡಿಕೊಂಡಿರುತ್ತೇನೆ ಎಂದರೆ ನುಡಿಯುುತ್ತಾರೆ .

ನನಗೆ ಆರೋಪಿ ಗೊತ್ತಿಲ್ಲದಿದ್ದರೂ ಸಹ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**01** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.